ಕರ್ನಾಟಕ ವಿಧಾನ ಸಭೆ

97 ಶ್ರೀ ಜಯಚಂದ್ರ ಟಿ.ಬಿ.
ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು

ಅ ಶಿರಾ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆಯನ್ನು ಬೆಳೆಯಲಾಗುತ್ತಿದೆ; ಬ್ಯಾಕ್ಟೀರಿಯಲ್ ಬ್ಲೈಟ್ ರೋಗದಿಂದ ವ್ಯಾಪಕ ಬೆಳೆ ಹಾನಿಯಾಗಿದ್ದು, ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

830 ಹೆಕ್ಟೇರ್ ಬಂದಿದೆ

830 Hectares Yes.

ಆ ಬಂದಿದ್ದಲ್ಲಿ, ರೋಗ ಪೀಡಿತ ಬೆಳೆಗಾರರಿಗೆ 2006–07 ರಿಂದ ಪ್ರತಿ ಹೆಕ್ಟೇರ್‌ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡಿರುವ ಸಹಾಯಧನ ವೆಷ್ಟು ಹಾಗೂ ಬಾಕಿ ನೀಡಬೇಕಾಗಿರುವ ಸಹಾಯಧನವೆಷ್ಟು;

2006–07–	ಪ್ರತಿ ಹೆಕ್ಟೇರ್‌ಗೆ ರೂ.22,500/– ಪುನಃಶ್ಚೇತನಕ್ಕಾಗಿ ತಲಾ ರೂ.10,000/– ರಂತೆ 488.4 ಹೆಕ್ಟೇರ್‌ಗಳಿಗೆ ರೂ.48.82 ಲಕ್ಷ ಸಹಾಯಧನವನ್ನು ನೀಡಿದೆ.
2007–08	ಪ್ರತಿ ಹೆಕ್ಟೇರ್‌ಗೆ ರೂ.25,000/– ಸಹಾಯಧನ ಒಟ್ಟು 189.46
2008–09	ಹೆಕ್ಟೇರ್‌ಗಳಿಗೆ ರೂ.47.36ಲಕ್ಷ ಸಹಾಯಧನ ನೀಡಲಾಗಿದೆ.

ಇ. ಈ ರೋಗ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕೈಗೊಂಡ ಕ್ರಮಗಳು ಕೆಳಕಂಡಂತಿವೆ;

1. ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಯೋಜನೆ ಅಡಿಯಲ್ಲಿ ದಾಳಿಂಬೆ ದುಂಡಾಣು ರೋಗ ನಿಯಂತ್ರಣಕ್ಕಾಗಿ ಉತ್ತಮ ನಿರ್ವಹಣಾ ಪದ್ಧತಿಗಳನ್ನು (Good Management Practices) ಅನುಸರಿಸಲು ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.25,000/– ದಂತೆ ಸಹಾಯಧನವನ್ನು 4 ಹೆಕ್ಟೇರ್‌ವರೆಗೆ ನೀಡಲಾಗುತ್ತಿದೆ.
2. ದುಂಡಾಣು ರೋಗದ ನಿಯಂತ್ರಣೆಗೆ ಸಮೀಕ್ಷೆ (Survey), ಕಣ್ಗಾವಲು (Surveillance), ತರಬೇತಿ (Training), ಪ್ರಾತ್ಯಕ್ಷಿಕೆ (Demonstration) ಮತ್ತು ರೋಗ ಮುನ್ಸೂಚನೆ ವ್ಯವಸ್ಥೆ (Disease Forecasting) ಕಲ್ಪಿಸಲು ಜಾಲವನ್ನು ರೂಪಿಸಲಾಗಿರುತ್ತದೆ.
3. ರಾಜ್ಯ ಸರ್ಕಾರದ ವತಿಯಿಂದ ದುಂಡಾಣು ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡು ನಿಯಂತ್ರಣಕ್ಕೆ ಪರಿಣಾಮಕಾರಿ

ನಿವಾರಣೋಪಾಯಗಳನ್ನು ಕಂಡು ಹಿಡಿಯಲು ರೂ.100 ಲಕ್ಷಗಳನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡರವರಿಗೆ ಮಂಜೂರು ಮಾಡಲಾಗಿದೆ.

ಕೃತೋಇ 14 ಕೃತೋಸ 2009

ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು

ಜಾ:

ಕರ್ನಾಟಕ ವಿಧಾನ ಸಭೆ

98 ಶ್ರೀ ಜಯಚಂದ್ರ ಟಿ.ಬಿ.

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಪಡಿತರ ಅಂಗಡಿಗಳಿಗೆ ಸೀಮೆಎಣ್ಣೆಯನ್ನು ವಿತರಿಸುವ ವಿತರಕರು ಸ್ಥಳೀಯರಾಗಿರುವುದರಿಂದ ಪದೇ ಪದೇ ಲೋಪದೋಷವಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದರ ಮೇಲೆ ಸದರಿ ವಿತರಕರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು;

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಪಡಿತರ ನ್ಯಾಯಬೆಲೆ ಅಂಗಡಿಗಳಿಗೆ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿದ್ದ ಮೆ: ಚಂದ್ರಶೇಖರ್ ಎಂಟರ್ ಪ್ರೈಸಸ್, ಸಗಟು ಸೀಮೆಎಣ್ಣೆ ವಿತರಕರು, ನ್ಯಾಯಬೆಲೆ ಅಂಗಡಿಗಳಿಗೆ ಸೀಮೆಎಣ್ಣೆ ವಿತರಣೆಯಲ್ಲಿ ನ್ಯೂನತೆಗಳು ಎಸಗಿರುವುದು ಕಂಡುಬಂದಿದ್ದರಿಂದ ಸದರಿ ಸಗಟು ವಿತರಕರ ಪ್ರಾದೀಕರಣವನ್ನು ಅಮಾನತ್ತು ಪಡಿಸಲಾಗಿದೆ ಹಾಗೂ ತಾಲ್ಲೂಕಿನ ಕಾರ್ಡುದಾರರ ಹಿತದೃಷ್ಟಿಯಿಂದ ಸೀಮೆಎಣ್ಣೆಯ ಸಗಟು ವಿತರಣೆಯನ್ನು ಮೆ॥ ಅಣೇಕಾರ್ ಬ್ರದರ್ಸ್ ಮತ್ತು ಕಂಪನಿ, ತುಮಕೂರುರವರಿಗೆ ವಹಿಸಿ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಆ) ಇದರಿಂದಾಗಿ ಶಾಶ್ವತವಾಗಿ ಬೇರೆ ವಿತರಕರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಸೀಮೆಎಣ್ಣೆ ಸಗಟು ವಿತರಕರ ಪ್ರಾಧಿಕರಣವನ್ನು ಅಮಾನತ್ತುಪಡಿಸಲಾಗಿದೆ ಹಾಗೂ ಪ್ರಕರಣವನ್ನು ಮಾನ್ಯ ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿ, ನ್ಯಾಯಾಲಯದ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು.

ಆನಾಸ 36 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು